ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರ ಕಛೇರಿ,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.

(ಕಛೇರಿ:08262-234904 ಫ್ಯಾಕ್ಸ್:08262-230032 ಇ-ಮೇಲ್:dcfbhadra@yahoo.com)

ಸಂಖ್ಯೆ: ಎ5/ಲ್ಯಾಂಡ್/ಸಿಆರ್-09/2008-09 | 3030 ದಿನಾಂಕ: 06-02-2020.

ಇವರಿಗೆ,

ಕುಲಸಚಿವರು,
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ-577451,
ಶಿವಮೊಗ್ಗ ಜಿಲ್ಲೆ.

ಮಾನ್ಯರೇ,

ವಿಷಯ: ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಗುತ್ತಿಗೆ ಆಧಾರದ ಮೇಲೆ ನೀಡಿದ 230 ಎಕರೆ ಜಮೀನಿನ ಬಗ್ಗೆ.

ಉಲ್ಲೇಖ:
1. Ministry of Enviornment and Forests, New Delhi letter No.6-1/2002/ WL-1, dt: 16-08-2002.
2. ನಿಮ್ಮ ಪತ್ರ ಸಂಖ್ಯೆ: ಕುವಿ/ಕುಸ/ಎ/6/5952/2019-20, ದಿನಾಂಕ: 08-01-2020.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಸಲ್ಲಿಸಲಾದ ದಾಖಲಾತಿಗಳನ್ನು ದಿನಾಂಕ: 09-01-2020 ರಂದು ಆನ್‌ಲೈನ್ ಮೂಲಕ ಸಲ್ಲಿಸಿರುವುದಾಗಿ ತಿಳಿಸಿದ್ದು, ಆನ್‌ಲೈನ್ ಅರ್ಜಿಯನ್ನು ಪರಿಶೀಲನೆ ಮಾಡಿದಾಗ ಆನ್‌ಲೈನ್‌ನಲ್ಲಿ ಯಾವುದೇ ದಾಖಲೆಗಳನ್ನು ಅಪ್‌ಲೋಡ್ ಮಾಡಿರುವುದಿಲ್ಲ. ಈ ಬಗ್ಗೆ ವಿಶ್ವವಿದ್ಯಾನಿಲಯದ ಶ್ರೀ ಪಾಲಾಕ್ಷ ನಾಯ್ಕ ಹಾಗೂ ಶ್ರೀ ಹೇಮಂತ್ ಇವರೊಂದಿಗೆ ಈ ಕಛೇರಿಯ ಭೂಮಿ ಶಾಖೆಯ ವಿಷಯ ನಿರ್ವಾಹಕರು ಚರ್ಚಿಸಿದ್ದು, ಸರಿಯಾದ ಮಾಹಿತಿ ಸಿಗದ ಕಾರಣ ಮಾಹಿತಿ ಮತ್ತು ಸಂಪರ್ಕ ಕಛೇರಿ, ಬೆಂಗಳೂರು ಇವರನ್ನು ಸಹ ಸಂಪರ್ಕಿಸಿದ್ದು, ಪ್ರಸ್ತಾವನೆಯನ್ನು ಆನ್‌ಲೈನ್‌ನಲ್ಲಿ ಮತ್ತೊಮ್ಮೆ ತಿರಸ್ಕರಿಸಿ ದಾಖಲೆಗಳನ್ನು ಅಪ್‌ಲೋಡ್ ಮಾಡುವಂತೆ ತಿಳಿಸಿರುತ್ತಾರೆ.

ಉಲ್ಲೇಖಿತ (1) ರ ಪತ್ರದನ್ವಯ 339 ಹೆಕ್ಟೇರ್ ಅಥವಾ 837.687 ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಗೆ ನೀಡಬೇಕಾಗಿರುತ್ತದೆ. ಅದರಂತೆ ಒಟ್ಟು 950.25 ಎಕರೆ ಪ್ರದೇಶವನ್ನು ನೀಡಿದ್ದು, ಅದರಲ್ಲಿ 141.22 ಎಕರೆ ಭೂಮಿಯು ಒತ್ತುವರಿಯಾಗಿರುತ್ತದೆ. ಇದರಿಂದ 809.030 ಎಕರೆ ಭೂಮಿಯನ್ನು ಮಾತ್ರ ನೀಡಿದಂತಾಗುತ್ತದೆ. ಆದ್ದರಿಂದ ಬಾಕಿ ಉಳಿದ 28.657 ಎಕರೆ ಭೂಮಿಯನ್ನು ಹಾಗೂ Forest Conservation Act ಪ್ರಕಾರ 230 ಎಕರೆ Non Forest land ನ್ನು ಸಹ ನೀಡಬೇಕಾಗಿರುತ್ತದೆ. ಈ ಕಾರಣದಿಂದಾಗಿ ನಿಮ್ಮ ಅರ್ಜಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಸಾಧ್ಯವಾಗುತ್ತಿಲ್ಲ.

ಆದ್ದರಿಂದ ಬಾಕಿ ಉಳಿದ 28.657 ಎಕರೆ ಭೂಮಿಯನ್ನು ಹಾಗೂ Forest Conservation Act ಪ್ರಕಾರ 230 ಎಕರೆ Non Forest land ನ್ನು ನೀಡಿದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು ಎಂಬ ವಿಷಯವನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ನಿಮ್ಮ ವಿಶ್ವಾಸಿ,

(ಸಹಿ)

ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.

ರವಾನಿಸಲಾಗಿದೆ
ದಿನಾಂಕ 06-02-2020

A5/2019-20/Kuvempu University letr